ಒಂದು ಸವಾಲು! ೨೦೦೧ ರ ಸಾಲಿನಲ್ಲಿ ಇದ್ದಕ್ಕಿದ್ದಂತೆ ಅಂಚೆ ಇಲಾಖೆ ಒಂದು ಫರ್ಮಾನು ಹೊರಡಿಸಿತು, ಅದೇಂದರೆ "ಆಧ್ಯಾತ್ಮಿಕ ಪತ್ರಿಕೆಗಳು ವರ್ತಮಾನ ಸುದ್ದಿಗಳನ್ನು ಪ್ರಕಟಿಸುವುದಿಲ್ಲವಾದ್ದರಿಂದ, ಅವುಗಳಿಗೆ ನೀಡಿರುವ ಅಂಚೆ ರಿಯಾಯತಿ ಹಿಂಪಡೆಯಲಿದ್ದೇವೆ" ಎಂದು. ಇದು ಆಘಾತಕಾರಿ ಅಂಶ. ಸಮಾಜದ ಹಿತಕ್ಕಾಗಿ, ಸ್ವಸ್ಥ ಮಾನಸಕ್ಕೆ ಬೇಕಾದ ಸಾಂಸ್ಕೃತಿಕ ವಿಚಾರಗಳನ್ನು ನೀಡುವುದು ಅಪ್ರಸ್ತುತ ಎಂಬುದು ಸರ್ಕಾರದ ಅಭಿಪ್ರಾಯ! ಈ ಆದೇಶ ಬದಲಿಸಲು ಬಹುಸಾಹಸ ಪಡಬೇಕಾಯಿತು.

ಇಡೀ ಸಮಾಜದ, ಸರ್ಕಾರದ ಧೋರಣೆ ಹೀಗಿರುವಾಗ ಆಧ್ಯಾತ್ಮಿಕ ಪತ್ರಿಕೆ ನಡೆಸುವ ಔಚಿತ್ಯವೇನು ಎಂಬ ಪ್ರಶ್ನೆ ಕಾಡುತ್ತದಲ್ಲವೆ? ಚಿಂತಕರೊಬ್ಬರು ಹೇಳಿದ್ದಾರೆ, "ಇಂದು ಕ್ರಿಸ್ತನೇನಾದರೂ ಬದುಕಿದ್ದರೆ ಟ್ರಿಬ್ಯೂನ್ ಪತ್ರಿಕೆಯಲ್ಲಿ ಒಂದು ಕಾಲಂ ಕಾದಿರಿಸುತ್ತಿದ್ದ!" ನಿಜ, ಮಾಧ್ಯಮ ಇಂದು ಜನಜೀವನದ ಅವಿಭಾಜ್ಯ ಅಂಗ. ಬೆಳಗಿನ ಕಾಫಿ ಮರೆತರೂ ದಿನಪತ್ರಿಕೆ ಓದುವುದನ್ನು ಜನ ಮರೆಯುವುದಿಲ್ಲ. ರಾತ್ರಿ ಊಟ ಮರೆತರೂ ಸೀರಿಯಲ್ ಮರೆಯವುದಿಲ್ಲ. ಇವರ ಬದುಕಿನಲ್ಲಿ ಮಧ್ಯಾಹ್ನದ ಜೋಂಪಿಗೆ ಮುನ್ನವಾದರೂ ಧಾರ್ಮಿಕ ಪತ್ರಿಕೆಯ ಲೇಖನಗಳು ಜೋಗುಳ ಹಾಡುವುದು ಉಚಿತ. ಕೆಲವರಾದರೂ ನಮ್ಮ ಆಧ್ಯಾತ್ಮಿಕ ಪತ್ರಿಕೆಗಳನ್ನು ಗಂಭೀರವಾಗಿ, ಸೂಕ್ಷ್ಮವಾಗಿ ಓದುವವರಿದ್ದಾರೆ. ಅವುಗಳಲ್ಲಿ ಬರುವ ಸಂಪಾದಕೀಯದ, ಲೇಖನಗಳ ಲೋಪದೋಷಗಳನ್ನು ತಿಳಿಸಿ, ಪತ್ರ ಬರೆದು, ಸಂಪಾದಕರು ಸದಾ ಜಾಗ್ರತರಾಗಿ ಜವಾಬ್ದಾರಿ ನಿರ್ವಹಿಸುವಂತೆ ಮಾಡುವಂಥ ಈ ಬಗೆಯ ಓದುಗರಿಗೆ ನೂರು ನಮನಗಳು. ಇಂಥವರು ಇರುವವರೆಗೆ ಆಧ್ಯಾತ್ಮಿಕ ಪತ್ರಿಕೆಗಳೂ ಇರುತ್ತವೆ.

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮ ಕನ್ನಡದ ಧಾರ್ಮಿಕ ಸಾಹಿತ್ಯಲೋಕಕ್ಕೆ ನೀಡಿರುವ ಅಪಾರ ಕೊಡುಗೆಯನ್ನು ನಾವಿಲ್ಲಿ ಸ್ಮರಿಸಬೇಕು; ಹಾಗೆಯೇ, ಕನ್ನಡ ಪತ್ರಿಕಾಲೋಕಕ್ಕೆ ಆಧ್ಯಾತ್ಮಿಕ ಪತ್ರಿಕೆಯಾದ 'ವಿವೇಕಪ್ರಭ' ವನ್ನು ನೀಡಿರುವುದಕ್ಕೆ ಆಶ್ರಮವನ್ನು ವಿಶೇಷವಾಗಿ ನಾವು ಶ್ಲಾಘಿಸಬೇಕು. 'ಬಂಜೆ ಬೇನೆಯರಿಯಳು, ಮಲದಾಯಿ ಮುದ್ದಬಲ್ಲಳೆ?' ಎಂಬಂತೆ ಸಂಪಾದಕನಾದ ನನಗೆ ಇಂಥದೊಂದು ಪತ್ರಿಕೆಯನ್ನು ನಡೆಸುವ ಸವಾಲುಗಳ ಪೂರ್ಣ ಅರಿವಿದೆ. ಆಶ್ರಮದ ಯತಿವೃಂದಕ್ಕೆ ಓದುಗಬಳಗಕ್ಕೆ ನನ್ನ ವೈಯಕ್ತಿಕ ಅಭಿನಂದನೆಗಳು ಮತ್ತು ವಿವೇಕಹಂಸ ಬಳಗದ ಹೃತ್ಪೂರ್ವಕ ಶುಭಾಶಯಗಳು.

'ವಿವೇಕಪ್ರಭ'ಕ್ಕೆ ಹತ್ತು ವರ್ಷ ತುಂಬಿದ ಹೆಮ್ಮೆ ನಮ್ಮೆಲ್ಲರಿಗೂ. ಈ ನಿಟ್ಟಿನಲ್ಲಿ ಇಂಥದೊಂದು ಅರ್ಥಪೂರ್ಣ ವಿಚಾರಸಂಕಿರಣ ನಡೆಸಿ ನಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅನುವು ಮಾಡಿ ಕೊಟ್ಟಿದ್ದಕ್ಕೆ ಧನ್ಯವಾದಗಳು. ಈ ದಿಸೆಯಲ್ಲಿ ಆಲೋಚಿಸುವಾಗ ಕನ್ನಡ ಧಾರ್ಮಿಕ ಪತ್ರಿಕೆಗಳು ಅಥವಾ ಆಧ್ಯಾತ್ಮಿಕ ಪತ್ರಿಕೆಗಳು ಒಟ್ಟಾಗಿ ಸೇರಿ ಒಂದು ಸಮ್ಮೇಳನ ನಡೆಸಬಾರದೇಕೆ ಎಂಬ ವಿಚಾರ ಗೋಚರಿಸುತ್ತದೆ. ನಮ್ಮ ನೋವು-ನಲಿವುಗಳನ್ನು ಹಂಚಿಕೊಳ್ಳಲು ಆಧ್ಯಾತ್ಮಿಕ ಪತ್ರಿಕೆಗಳದೇ ಒಂದು ವೇದಿಕೆ ನಿರ್ಮಾಣವಾಗಬೇಕು. 'ವಿವೇಕಪ್ರಭ'ದ ದಶಮಾನೋತ್ಸವದ ವಿಚಾರಸಂಕಿರಣ ಈ ನಿಟ್ಟಿನಲ್ಲಿ ನಮ್ಮ ಮೊದಲ ಹೆಜ್ಜೆ ಎಂದು ಭಾವಿಸುತ್ತೇನೆ. 'ವಿವೇಕಪ್ರಭ' ಹೀಗೆ ೨೫, ೫೦, ೧೦೦ ವಸಂತಗಳನ್ನು ದಾಟಿ ಯಶಸ್ವಿಯಾಗಿ ಮುನ್ನಡೆಯಲೆಂದು ಎಲ್ಲ ಓದುಗರ ಪರವಾಗಿ ಆಶಿಸುತ್ತೇನೆ, ಹಾಗಾಗಲೆಂದು ದಿವ್ಯತ್ರಯರಲ್ಲಿ ಪ್ರಾರ್ಥಿಸುತ್ತೇನೆ.

## ಸ್ನೇಹಪ್ರಭ

**ಸಂಘಸಂಸ್ಥೆಗಳಲ್ಲಿ ಕೆಲಸಮಾಡುವಾಗ, ಕೆಲವರು ಮಾಡುವ ಅನ್ಯಾಯವನ್ನು ನಿಲ್ಲಿಸಬೇಕು ಎಂಬ ಮನಸ್ಸು ಬರುತ್ತದೆ. ಆದರೆ ಅಸಹಾಯಕ ಸ್ಥಿತಿ. ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕು?**

ಆಂಗ್ಲಭಾಷೆಯಲ್ಲಿ ಒಂದು ಪ್ರಾರ್ಥನೆಯಿದೆ: "ಹೇ ಪ್ರಭು, ನಾನು ಯಾವುದನ್ನು ಬದಲಾಯಿಸಲಾಗುವುದಿಲ್ಲವೋ ಅದನ್ನು ಒಪ್ಪಿಕೊಳ್ಳುವ ಔದಾರ್ಯವನ್ನೂ, ಬದಲಾಯಿಸಬಹುದಾದುದನ್ನು ಬದಲಾಯಿಸುವ ಧೈರ್ಯವನ್ನೂ, ಇವೆರಡರ ನಡುವಿನ ವ್ಯತ್ಯಾಸವನ್ನು ಅರಿಯುವ ವಿವೇಕವನ್ನೂ ನನಗೆ ದಯಪಾಲಿಸು." ನಮ್ಮ ಅಸಹಾಯಕ ಸ್ಥಿತಿಯನ್ನು ನಾವು ಒಪ್ಪಿಕೊಳ್ಳಬೇಕು. ಅದಕ್ಕಾಗಿ ಭಗವಂತನ ಸಹಾಯವನ್ನು ಯಾಚಿಸಬೇಕು. ಬದುಕು ಸಂಕೀರ್ಣವಾದುದು, ಜಗತ್ತು ವಿಶಾಲವಾದುದು. ಯಾವುದೂ ನಮ್ಮ ಎಣಿಕೆಯಂತೆ ನಡೆಯುವುದಿಲ್ಲ. ನಡೆಯಬೇಕೆಂದು ನಿರೀಕ್ಷಿಸುವುದೂ ಸರಿಯಲ್ಲ. ನಮ್ಮ ಕರ್ತವ್ಯದ ಕಡೆಗೆ ನಾವು ಹೆಚ್ಚು ಗಮನ ಹರಿಸುವುದು ಒಳ್ಳೆಯದು. ಕೆಲವೊಮ್ಮೆ ಲೋಕದ ಡೊಂಕನ್ನು ತಿದ್ದಲು ಹೋಗಿ ನಾವೇ ಡೊಂಕಾಗಬಹುದು.

ಸಮಾಜಕ್ಕೆ ತನ್ನದೇ ಆದ ಗತಿ ಇದೆ. ಅದಕ್ಕೆ ತನ್ನದೇ ಆದ ನಿಯಮವಿದೆ. ಅದರ ಗತಿಯನ್ನು ನಾವು ಬದಲಾಯಿಸಲಾರೆವು. ನಾವು ಕೆಲವರಿಗೆ ಸಹಾಯ ಮಾಡಬಹುದು. ಕೆಲವು ಲೋಪದೋಷಗಳನ್ನು ತಿದ್ದಬಹುದು, ಅಷ್ಟೆ. ನಮ್ಮ ಸೀಮಿತ ವಲಯದಲ್ಲಿ ನಾವು ಎಷ್ಟು ಒಳ್ಳೆಯದನ್ನು ಮಾಡಬಹುದೋ ಅಷ್ಟನ್ನು ಮಾಡೋಣ. ಉಳಿದುದನ್ನು ದೇವರಿಗೆ ಬಿಟ್ಟುಬಿಡೋಣ. ಅವನಿಚ್ಛೆಯಂತಾಗಲಿ. ನಮ್ಮ ಕೈಲಾದುದನ್ನು ಮಾಡುವುದು, ನಮ್ಮ ಕೈಮೀರಿದ್ದನ್ನು ಭಗವಂತನಿಗೆ ಬಿಡುವುದು. ಈ ರೀತಿಯ ಶರಣಾಗತಿಯ ಭಾವವನ್ನು ಬೆಳೆಸಿಕೊಂಡರೆ ಅಸಹಾಯಕ ಭಾವ ನಮ್ಮನ್ನು ಕಾಡುವುದಿಲ್ಲ.

ಉಪ್ಪು ತಿಂದವನು ನೀರು ಕುಡಿಯಲೇ ಬೇಕು. ಅದೇ ರೀತಿ, ಅನ್ಯಾಯವನ್ನು ಮಾಡಿದ ವ್ಯಕ್ತಿ, ಅದರ ಫಲವನ್ನು ಅನುಭವಿಸಿಯೇ ತೀರುತ್ತಾನೆ. ಒಟ್ಟಿನಲ್ಲಿ ನಾವು ಅಸಹಾಯಕರು ಎಂಬ ಭಾವನೆ ನಮಗೆ ಬರಬಾರದು. ಭಗವಂತ ನಮ್ಮ ಜೊತೆ ಯಾವಾಗಲೂ ಇದ್ದಾನೆ. ಅವನ ಸಾನ್ನಿಧ್ಯವನ್ನು ಭಾವಿಸುವ ತನಕ ನಾವೆಂದೂ ಅಸಹಾಯಕರಾಗಲು ಸಾಧ್ಯವಿಲ್ಲ. (ಬರಹ: ಸ್ವಾಮಿ ನಿತ್ಯಸ್ಥಾನಂದ)